## ನಕ್ಕುಬಿಡಿ



ಟೀಚರ್: ನಾನು 1, 2, 3 ಗೋ ಎಂದ ಕೂಡಲೇ ನೀವು ಓಡಬೇಕು ಓಕೆನಾ?
ವಿದ್ಯಾರ್ಥಿಗಳು: ಓಕೆ ಮಿಸ್.
ಟೀಚರ್: 1, 2, 3 ಗೋ. ಯಾಕೋ ಕಾಡಪ್ಪ ನೀನು ಓಡಲಿಲ್ಲ?
ಕಾಡಪ್ಪ: ಮಿಸ್, ನೀವು 1, 2, 3 ಅಂತಷ್ಟೇ ಹೇಳಿದ್ರಿ. ನಾಲ್ಕನೇ ನಂಬರ್ ಹೇಳಲಿಲ್ಲ. ನಂದು 4ನೇ ನಂಬರ್!

★★★

ಕ್ರಿಕೆಟಿಗ ಮೋಹ್ಲಿ: ಡಾಕ್ಟ್ರೇ, ನನಗೆ ಜ್ವರ ಬಂದಂತಿದೆ ಪರೀಕ್ಷಿಸಿ.
ವೈದ್ಯ: ಹೌದು, ನೀವು 101 ಡಿಗ್ರಿ ಜ್ವರದಿಂದ ಬಳಲುತ್ತಿದ್ದೀರಿ.
ಕ್ರಿಕೆಟಿಗ ಮೋಹ್ಲಿ: ಡಾಕ್ಟ್ರೇ ಇದರಲ್ಲಿ ವರ್ಲ್ಡ್ ರೆಕಾರ್ಡ್ ಎಷ್ಟು?

★★★

ಪ್ರಾಂಶುಪಾಲ: ನಿನ್ನ ದಾಖಲಾತಿ ಕಡಿಮೆ ಇದೆ. ಈ ಸಲ ಪರೀಕ್ಷೆಗೆ ಕುಳಿತುಕೊಳ್ಳಲು ನಿನಗೆ ಅವಕಾಶವಿಲ್ಲ.
ಗುಂಡ: ಪ್ಲೀಸ್ ಸಾರ್! ಹಾಗೆ ಮಾಡಬೇಡಿ. ಈ ಸಲ ಕುಳಿತುಕೊಳ್ಳಲು ಅವಕಾಶ ಕೊಡದಿದ್ದರೂ ಪರವಾಗಿಲ್ಲ. ನಿಂತುಕೊಂಡೇ ಪರೀಕ್ಷೆ ಬರೆಯುತ್ತೇನೆ!

★★★

ಶಿಕ್ಷಕ: ಕರಡಿಯ ಮೈ ತುಂಬಾ ಯಾಕೆ ಅಷ್ಟೊಂದು ಕೂದಲುಗಳಿರುತ್ತವೆ?
ಕಾಡಪ್ಪ: ಕಾಡಿನಲ್ಲಿ ಕಟಿಂಗ್ ಶಾಪ್ ಇರೋದಿಲ್ಲ ಅಲ್ವಾ ಸರ್ ಅದಕ್ಕೆ!

★★★

ಪೊಲೀಸ್: ದ್ವಿಚಕ್ರ ವಾಹನದಲ್ಲಿ ಮೂವರು ಹೋಗುವುದಕ್ಕೆ ನಿಷೇಧವಿದೆ. ಎಷ್ಟು ಧೈರ್ಯವಿದ್ದರೆ ನೀವು ನಾಲ್ವರು ಹೋಗುತ್ತೀರಿ?
ಕುಡುಕ ಸವಾರ: ನಾಲ್ವರಾ? (ಹಿಂದೆ ತಿರುಗಿ) ನಾವಿದ್ದದ್ದು ಐವರು. ಇನ್ನೊಬ್ಬ!

★★★

(ಬೋರ್ಡ್‌ನಲ್ಲಿ ಹೀಗಿತ್ತು–ಬನಾರಸ್ ಸೀರೆ ₹10, ನೈಲಾನ್ ಸೀರೆ ₹8, ಕಾಟನ್ ಸೀರೆ ₹5. ಅದನ್ನು ಪಮ್ಮಿ–ಜಿಮ್ಮಿ ಗಮನಿಸಿದ್ದರು)
ಪಮ್ಮಿ: ರೀ, ₹500 ಕಾಸು ಕೊಡಿ. 50 ಬನಾರಸ್ ಸೀರೆಗಳನ್ನು ಖರೀದಿಸುವೆ.
ಜಿಮ್ಮಿ: ಲೇ! ಸುಮ್ನೆ ಬಾರೆ ಅದು ಇಸ್ತ್ರಿ ಅಂಗಡಿ ಬೋರ್ಡ್!

(ಸಂಗ್ರಹ) ಕುಬೇರಪ್ಪ ಎಂ. ವಿಭೂತಿ, ಹರಿಹರ


